ಎಕ್ಕ ಬಂದರೆ ಒಂದು ಕೈ ನೋಡೇಬಿಡುವಾ ಎಂದುಕೊಂಡ ರಾಚನಿಗೆ ಆಟೀಣು ಕೈಗೆ ಹತ್ತಿದ್ದೇ 'ಹೋ' ಎಂದು ಒದರಿಕೊಂಡ.

'ಕಷ್ಟಾನೋ ಸುಖಾನೋ ನಾವು ಒಗ್ಗಟ್ಟಿನಲ್ಲಿದ್ದವರು ಈ ಪರಿಸ್ಥಿತಿಯಲ್ಲಿ ಗುಮ್ಮನ ಗುಸಕನ ಹಾಂಗೆ ಗಳಿಗೆಗೊಂದು ಯೋಚನೆ ಮಾಡುದು ಸಲ್ಲ, ದೊಂಬಿಯಲ್ಲಿ ಭಾಗವಹಿಸಲೇ ಬೇಕು ಅಂತಾಗಿದೆ ಹೇಳಾದರೆ ಅದನ್ನೂ ಮಾಡುವಾ. ಆದರೆ ಸಿಕ್ಕಿಬೀಳುವುದಿಲ್ಲ ಅನ್ನೂ ಗ್ಯಾರಂಟಿ ಏನಿದೆ?' ಮೆಸ್ತ ಕಳಾವರ ಎಂದು ಗೊತ್ತಿಲ್ಲದೆ ಸಾವಕಾಶವಾಗಿ ಎಲೆ ಎಳೆಯುತ್ತ ಬಾಯ್ತೆಗೆದ.

'ಎಲ್ರಿಗೂ ಆಗಿದ್ದೇ ನಮಗೂ ಆಗ್ತದೆ ಹೇಳಿ. ಎಲ್ರನ್ನೂ ಜೈಲಿಗೆ ಹಾಕ್ತಾರೆ ಹೇಳಾದ್ರೆ ನಮ್ಮನ್ನೂ ಜೈಲಿಗೆ ಹಾಕ್ತಾರೆ. ಆದ್ರೆ ಬಿಡಸ್ಕ ಬರಲಿಕ್ಕೆ ಒಂದಲ್ಲಾ ಒಂದು ಪಕ್ಷದವರು ಬರದೇ ಇರುವ ಹಾಂಗಿಲ್ಲ. ವಿರೋಧವಾಗಿ ಒಂದು ಪಕ್ಷ ಇದೆ ಹೇಳಾದ್ರೆ, ಪರವಾಗಿದ್ದವರ ಪಕ್ಷವೂ ಇದ್ದೇ ಇರ್ತದೆ. ಗಲಾಟೆ ಏನು ಸುಮ್ಮನೆ ಆಗ್ತಿದಿದ್ದಲ್ಲ. ಗಲಾಟೆ ಮಾಡ್ಲಿಕ್ಕೂ ಒಂದಲ್ಲಾ ಒಂದು ಪಕ್ಷದವ್ರು ಸಹಾಯ ಮಾಡೇ ಮಾಡಿರ್ತ್ರ್. ಆದ್ರೆ ನಾವು ರಾಗೂಗೆ ಹೊಡೆಯಲಿಕ್ಕೆಂದು ಬಂದವರು ಹೇಳಿ ಯಾರಿಗೂ ಸೂಟು ಸಿಗಬಾರದು. ಅವರೊಟ್ಟಿಗೆ ಸೇರಿ ಗಲಾಟೆ ಮಾಡುವವರು ಹೇಳೇ ಎಲ್ರಿಗೂ ಕಡೆವರೆಗೂ ಅನ್ನಿಸಬೇಕು. ಅದಿಷ್ಟು ಮಾಡಿದ್ರೆ ನಾವು ಗೆದ್ದ ಹಾಂಗೇಯಾ' ಎಂದು ಮಹೇಶ ತಾನು ಹೊಸೆದು ಹಗ್ಗ ಮಾಡಿದ ವಾದವನ್ನೇ ಮತ್ತೆ ಮತ್ತೆ ಹೊಸೆದ. ರಾಚನಿಗೆ ಈ ಉಪಾಯ ಸರಿಯಾಗಿಯೇ ಕಂಡಿತ್ತು. 'ಆ ರಾಗು ಚೋದಿಮಗನ ಧಿಮಾಕು ಇಳಿಸಿದ್ರೆ ಪದೇಪದೆ ಕಾಲು ಕೆರೆದು ಜಗಳಕ್ಕೆ ಬರುವುದಾದರೂ ಕಮ್ಮಿ ಆಗ್ತದೆ. ಇಲ್ದಿದ್ರೆ ದಿನ ಬೆಳಗಾದ್ರೆ ಅವನ ಆಟಾಪ ಕೇಳಬೇಕು. ಅಷ್ಟಕ್ಕೂ ರಾಗೂನ ಇಂತಾ ಗಲಾಟೆ ಸಮಯದಲ್ಲಿ ಹೊಡೆದುಕೊಂಡರೆ, ನಮ್ಮ ಮೇಲೆ ಅನುಮಾನ ಬರುವುದಕ್ಕಿಂತ ವಿರೋಧ ಪಂಗಡದ ಮೇಲೆ ಸಂದೇಹ ಬರುವುದೇ ಜಾಸ್ತಿ. ನಾಳಿನ ಗಲಾಟೆಯಲ್ಲಿ ಹೇಗಾದ್ರೂ ಮಾಡಿ ಅವನನ್ನ ಮಧ್ಯಾಹ್ನದ ಹೊತ್ತಿಗೆ ಹಳಕಾರಿನ ದೊಡ್ಡಾಲದ ಮರದ ಬುಡಕ್ಕೆ ಬರುವ ಹಾಂಗೆ ಮಾಡ್ಬೇಕು. ಕಡಿಗೆ ಸಮಾ ಜಪ್ಪಿ ಬುದ್ಧಿ ಕಲಿಸಬೇಕು' ಎಂದು ರಾಚನೂ ಮಹೇಶನ ದನಿಗೆ ದನಿ ಸೇರಿಸಿ ಹೀಗೆ ಆಗಲೇಬೇಕು ಎಂದಾಗ ಪಚ್ಚು ಮತ್ತು ಮೆಸ್ತಾ ದೂಸರಾ ಆಡಿದರೆ ನಡೆಯುವುದಿಲ್ಲ ಎಂದು ಅವರೂ ಒಪ್ಪಿ ತಲೆ ಕುಣಿಸಿದರು. ಆದರೂ ಅವರಿಬ್ಬರಿಗೆ ಒಳಗೊಳಗೆ ಪುಕಪುಕ ಇಲ್ಲವೆಂದಲ್ಲ, ಸದ್ಯಕ್ಕೆ ಬೇರೆ ಗತಿಯಿರಲಿಲ್ಲ.

ಕಡ್ಲೆಗುಡ್ಡೆಯ ಮೇಲೆ ಕುಳಿತ ಮಂಡಳಿ ಪಿಚಕ್ಕನೆ ಉಗುಳುತ್ತಿದ್ದ ಪಾನು ಮಸಾಲಾ, ಗುಟಕಾಗಳೆಲ್ಲ ಸೂರ್ಯನಿಗೂ ಸೀರಿತೇ ಎಂಬಂತೆ ಮೈಯೆಲ್ಲ ಕೆಂಪು ಕೆಂಪಾದ ಸೂರ್ಯ ಅಂದಿನ ಕರ್ತವ್ಯ ಮುಗಿಸಿ ಸಮುದ್ರದಲ್ಲಳಿದು ಹೋದ.

ಮರುದಿನ ಕುಮಟೆಯ ಹಣೆಬರಹದಲ್ಲೇ ಮೊದಲ ಬಾರಿಗೆ ಎಂದೂ ಕಂಡರಿಯದ ದಿನ ತೆರೆದುಕೊಳ್ಳುವುದರಲ್ಲಿತ್ತು. ಯಾವುದೋ ಕಾಲ ಎಂಬಂತಾಗಿದ್ದ ತಾತ ಮುತ್ತಾತನ ಕಾಲದಲ್ಲಿ ಆದ ಸ್ವಾತಂತ್ರ್ಯ ಹೋರಾಟದ ಸಣ್ಣಪುಟ್ಟ ಘಟನೆಯ ಹೊರತಾಗಿ ಇದುವರೆಗೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಜನ ಸೇರಿ ದೊಂಬಿ ಗಲಾಟೆ ಅಂತ ಮಾಡಿದ್ದೇ ಇಲ್ಲ.

ಎಲ್ಲೆಲ್ಲಿ ಯಾರು ಯಾರು ಹೊಂಚಿದ್ದಾರೆ ಎಂಬುದು ಖುದ್ದು ಕುಮಟೆ ಪೇಟೆಗೂ ತಿಳಿದಿರಲಿಲ್ಲ. ಆದರೂ ಗಾಜಿನ ಲೋಟದಲ್ಲಿ ತಣ್ಣಗೆ ಕರಗುವ ಗಡ್‌ಬಡ್, ಬುಟ್ಟಿಯೊಳಗಿನ ಬಂಗಡೆಶೆಟ್ಲಿಯ ಹೊರತಾಗಿಯೂ ಇನ್ನ್ಯಾವುದೋ ಒಂದು ವಿಷಯವನ್ನು ತನ್ನಲ್ಲವಿಸಿಕೊಂಡು ಬೂದಿ ಮುಚ್ಚಿದ ಕೆಂಡವಾದ ಕುಮಟೆ ಪೇಟೆ ನಾಳೆ ನಿರ್ವಿಕಾರವಾಗಿ ಎದುರಿಗೆ ಬಂದವರನ್ನೆಲ್ಲ ಬಡಿದು, ಸಿಕ್ಕಿದ್ದನ್ನೆಲ್ಲ ಆಪೋಶನಕ್ಕೆ ತೆಗೆದುಕೊಳ್ಳುವುದರಲ್ಲಿತ್ತು.

ಬಿರುಗಾಳಿ ಬೀಸುವ ಮೊದಲಿನ ಶಾಂತತೆ ಹೇಗಿರುತ್ತದೆ ಗೊತ್ತಲ್ಲ, ಅಷ್ಟು ಶಾಂತವಾಗಿತ್ತು